OS 199/2019 PW-1

**ದಿನಾಂಕಃ 21.07.2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ 18 ಮತ್ತು 19 ನೇ ಪ್ರತಿವಾದಿಗಳ ಪರ ಶ್ರೀ ಹೆಚ್ ಬಿ ವಿ ವಕೀಲರಿಂದಃ</u>**

ನಾನು 4 ನೇ ತರಗತಿವರೆಗೆ ಓದಿರುತ್ತೇನೆ. ನನ್ನ ತಾತನ ಹೆಸರು ಈರದಾಸಯ್ಯ ಎಂದರೆ ಸರಿ. ನನ್ನ ತಾತ ಈರದಾಸಯ್ಯನಿಗೆ 4 ಜನ ಗಂಡು ಮಕ್ಕಳು , ಇಬ್ಬರು ಹೆಣ್ಣು ಮಕ್ಕಳು. ಸದರಿಯವರು ಕಳಸಪ್ಪ , ಗಂಟಪ್ಪ , ರಂಗಯ್ಯ ಮತ್ತು ಕೆ.ರಂಗಯ್ಯ. ಸದರಿ ಕೆ.ರಂಗಯ್ಯನವರನ್ನು ಕರೇ ರಂಗಯ್ಯ ಎಂದು ಕರೆಯುತ್ತಾರೆ ಎಂದರೆ ಸರಿ. ತಿಮ್ಮಕ್ಕ ಮತ್ತು ರಂಗಮ್ಮ ಹೆಣ್ಣು ಮಕ್ಕಳು. ತಿಮ್ಮಕ್ಕಳನ್ನು ಮ್ಯಾಗಳಹಳ್ಳಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ತಿಮ್ಮಕ್ಕನ ಗಂಡನ ಹೆಸರು ಗೊತ್ತಿಲ್ಲ. ಅವರಿಗೆ ಎಷ್ಟು ಜನ ಮಕ್ಕಳು ಎಂದರೆ ಅವರಿಗೆ ಮಕ್ಕಳು ಇಲ್ಲ ಎಂದು ನುಡಿಯುತ್ತಾರೆ. ರಂಗಮ್ಮಳನ್ನು ಬರಕನಾಳು ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ರಂಗಮ್ಮಳ ಗಂಡನ ಹೆಸರು ಗವಿರಂಗಯ್ಯ.

2. ನನ್ನ ತಂದೆಯ ಹೆಸರು ಗಂಟಪ್ಪ. ನನ್ನ ತಂದೆಗೆ 4 ಜನ ಗಂಡು ಮಕ್ಕಳು , 4 ಜನ ಹೆಣ್ಣು ಮಕ್ಕಳು ಇರುತ್ತೇವೆ. ಸಣ್ಣರಂಗಯ್ಯ , ಕರಿಯಪ್ಪ , ಬಬ್ಬೂರಯ್ಯ ಮತ್ತು ಭೂತಯ್ಯ ಎಂಬ ಗಂಡು ಮಕ್ಕಳು. ಲಕ್ಕಮ್ಮ , ಗಂಗಮ್ಮ , ಪಾರ್ವತಮ್ಮ ಮತ್ತು ಸುಶೀಲಮ್ಮ ಎಂಬ ಹೆಣ್ಣು ಮಕ್ಕಳು. ಸದರಿಯವರಲ್ಲಿ ಲಕ್ಕಮ್ಮ ಮತ್ತು ಕರಿಯಪ್ಪ ಮರಣಹೊಂದಿರುತ್ತಾರೆ. ಲಕ್ಕಮ್ಮಳನ್ನು ಕಂಚೀಪುರ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ಲಕ್ಕಮ್ಮಳ ಗಂಡ ಮತ್ತು ಮಕ್ಕಳು ಜೀವಂತವಾಗಿದ್ದಾರೆ.

3. ನನ್ನ ಅಣ್ಣ ಕರಿಯಪ್ಪನಿಗೆ 4 ಜನ ಹೆಣ್ಣು ಮಕ್ಕಳು , ಒಬ್ಬನೇ ಗಂಡು ಮಗ ಇರುತ್ತಾರೆ. (ಪ್ರತಿವಾದಿ 2 ರಿಂದ 6 ) ನನ್ನ ತಂದೆಯ ಅಣ್ಣನ ಕಳಸಪ್ಪನ ಹೆಂಡತಿಯ ಹೆಸರು ಹನುಮಕ್ಕ. ಸದರಿಯವರಿಗೆ ಒಂದು ಗಂಡು ಮತ್ತು ಒಂದು ಹೆಣ್ಣು. ಗಂಡು ಮಗನ ಹೆಸರು ರಂಗಯ್ಯ , ಅವನು 50 ವರ್ಷದ ಹಿಂದೆ ಊರು ಬಿಟ್ಟು ಹೋಗಿರುತ್ತಾನೆ. ಹೆಣ್ಣು ಮಗಳ ಹೆಸರು ಗೌರಮ್ಮ. ನನ್ನ ಚಿಕ್ಕಪ್ಪ ರಂಗಯ್ಯನ ಹೆಂಡತಿಯ ಹೆಸರು ರಂಗಮ್ಮ.

ಸದರಿಯವರಿಗೆ 4 ಜನ ಹೆಣ್ಣು ಮಕ್ಕಳು. ಅವರುಗಳೆಂದರೆ ಜಯಮ್ಮ , ಶಿವಮ್ಮ , ಪುಟ್ಟಮ್ಮ ಮತ್ತು ಶಾರದಮ್ಮ. ಪುಟ್ಟಮ್ಮಳನ್ನು ಮಂಚಲದೊರೆ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ. ಅವರ ಗಂಡ ಮತ್ತು ಮಕ್ಕಳು ಜೀವಂತವಾಗಿರುತ್ತಾರೆ. ಜಯಮ್ಮ ತೀರಿಕೊಂಡಿರುತ್ತಾರೆ. ಅವರ ಗಂಡ ಮತ್ತು ಮಕ್ಕಳು ಜೀವಂತವಾಗಿರುತ್ತಾರೆ. ಶಿವಮ್ಮ ಮತ್ತು ಪುಟ್ಟಮ್ಮ ಜೀವಂತವಿರುತ್ತಾರೆ.ಶಾರದಮ್ಮ ಮದುವೆಯಾಗದೇ ತೀರಿಕೊಂಡಿರುತ್ತಾರೆ. ರಂಗಯ್ಯನ ಗಂಡು ಮಕ್ಕಳ ಹೆಸರು ನಾಗರಾಜು ಮತ್ತು ಶಿವಣ್ಣ . ನಾಗರಾಜುವಿನ ಹೆಂಡತಿಯ ಹೆಸರು ನರಸಮ್ಮ ಎಂದರೆ ಸರಿ. ಅವರ ಗಂಗಾಧರ ಮತ್ತು ರಂಗನಾಥ್ ಎಂಬ ಇಬ್ಬರು ಮಕ್ಕಳು. ಕೆ.ರಂಗಯ್ಯನ ಹೆಂಡತಿ ಪುಟ್ಟಮ್ಮ. ಅವರಿಗೆ ಮಕ್ಕಳು ಇರಲಿಲ್ಲ.

4. ವಾದಿ ಮತ್ತು ಪ್ರತಿವಾದಿ 1 ರಿಂದ 13 ರವರು ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಂದಿ ಕೆರೆ ಹೋಬಳಿ , ಬಡಕೆಗುಡ್ಲು ಗ್ರಾಮದಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ನನ್ನ ತಾತ , ನನ್ನ ತಂದೆ ಮತ್ತು ನಾವು ಎಲ್ಲರೂ ಬಡಕೆಗುಡ್ಲು ಗ್ರಾಮದಲ್ಲಿಯೇ ವಾಸವಾಗಿದ್ದೇವೆ ಎಂದರೆ ಸರಿ. ಕಳಸಪ್ಪ , ಗಂಟಪ್ಪ , ರಂಗಯ್ಯ ಮತ್ತು ಕೆ.ರಂಗಯ್ಯ ಇವರುಗಳು ಅವರ ಜೀವಿತಾವಧಿಯಲ್ಲಿ ಅಸ್ತಿಗಳನ್ನು ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿ. ಕಳಸಪ್ಪ , ಗಂಟಪ್ಪ , ರಂಗಯ್ಯ ಮತ್ತು ಕೆ.ರಂಗಯ್ಯ ಇವರುಗಳು ಬಡಕೆಗುಡ್ಲು ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ಕೆ.ರಂಗಯ್ಯ ಅಲಿಯಾಸ್ ಕರೇರಂಗಯ್ಯ ನವರು ಶಿರಾ ತಾಲ್ಲೂಕು , ಬುಕ್ಕಾಪಟ್ಟಣ ಗ್ರಾಮದಲ್ಲಿ ಮದುವೆಯಾಗಿದ್ದರು ಎಂದರೆ ಸರಿ. ಮದುವೆಯ ನಂತರ ಕರೇ ರಂಗಯ್ಯ ಬುಕ್ಕಾಪಟ್ಟಣದಲ್ಲಿ ಹೆಂಡತಿಯ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಅಂದಿನಿಂದಲೂ ಅವರು ಮರಣಹೊಂದುವವರೆಗೂ ಬುಕ್ಕಾಪಟ್ಟಣ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಬಡಕೆಗುಡ್ಲಿಗೆ ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಬಡಕೆಗುಡ್ಲು ಗ್ರಾಮದಲ್ಲಿ ಕಳಸಪ್ಪ , ಗಂಟಪ್ಪ ಮತ್ತು ರಂಗಯ್ಯ ಇವರು ಮನೆ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲಿ ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ.

**18 ಮತ್ತು 19 ನೇ ಪ್ರತಿವಾದಿಗಳ ಪರ ಶ್ರೀ ಹೆಚ್ ಬಿ ವಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.